ಅ) ಗಮನದಲ್ಲಿದೆ

ಇ) ಮತ್ತು ಈ) ಅನುದಾನದ ಕೊರತೆಯಿಂದ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ ಪ್ರಸಕ್ತ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಮಂಜೂರಾಗಿರುವ ಪೂರಕ ಅನುದಾನದಿಂದ 20 00 ಲಕ್ಷ ರೂ ಗಳ ಅಂದಾಜು ಮೊತ್ತದೊಂದಿಗೆ ಮಾದಾಪುರ ಕೆರೆ ಸುಧಾರಣೆ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ

ಉ) 2007–08ನೇ ಸಾಲಿನಲ್ಲಿ ಅನುದಾನದ ಲಭ್ಯತೆಯ ಮೇರೆಗೆ ಇತರೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು

810 (1242) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿಗ್ಗಾಂವ–ಸವಣೂರ ತಾಲ್ಲೂಕುಗಳಲ್ಲಿರುವ ಬರಡು ಭೂಮಿಯನ್ನು ಅಭಿವೃದ್ಧಿಪಡಿಸದೇ ಇರುವುದು ಹಾಗೂ ಬಂಕಾಪುರ ಪಟ್ಟಣದಲ್ಲಿರುವ ನವಿಲುಧಾಮದ ಪ್ರಾರಂಭ ಕಾರ್ಯರೂಪಕ್ಕೆ ಬರದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) 2005–06ನೇ ಸಾಲಿನಿಂದ ಜೆ ಬಿ ಐ ಸಿ ಯೋಜನೆಯ ಎರಡನೆಯ ಹಂತದ ಕಾರ್ಯಕ್ರಮದಡಿ ಅರಣ್ಯೀಕರಣಕ್ಕೆ ಪ್ರಸ್ತಾಪಿಸಲಾಗಿದೆಯೆಂದು ಈ ಹಿಂದೆ ತಿಳಿಸಿದ್ದರೂ ಈವರೆಗೂ ಕಾರ್ಯರೂಪಕ್ಕೆ ಬರದೇ ಇರುವುದಕ್ಕೆ ಕಾರಣಗಳೇನು ,

ಇ) ಬರಡು ಭೂಮಿ ಅರಣ್ಯೀಕರಣಕ್ಕೆ ಎಷ್ಟು ಅನುದಾನವನ್ನು ಸರ್ಕಾರ ಬಿಡುಗಡೆಗೊಳಿಸಲಾಗಿದೆ ಹಾಗೂ ಯಾವ ಸ್ಥಳಗಳಲ್ಲಿ ಅರಣ್ಯೀಕರಣ ಪ್ರಾರಂಭಿಸಲಾಗುತ್ತಿದೆ (ಗ್ರಾಮವಾರು ಲಿಖಿತ ಮಾಹಿತಿ ಒದಗಿಸುವುದು) ,

ಈ) ಇಲಾಖಾ ಯೋಜನೆಗಳಿಗೆ ಅನುದಾನವನ್ನು ಆಯಾಯಾ ವಿಭಾಗದ ಆಧಾರದ ಮೇಲೆ ಬಿಡುಗಡೆಗೊಳಿಸಲಾಗುವುದೋ ಅಥವಾ ವಿಭಾಗದಲ್ಲಿ ಬರುವ ವಲಯಗಳ ಅರಣ್ಯ ಪ್ರದೇಶದ ಆಧಾರದ ಮೇಲೆ ಅನುದಾನ ಬಿಡುಗಡೆಗೊಳಿಸಲಾಗುವುದೇ ,

ಉ) ಈ ವಿಷಯಗಳ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದು ಯಾವಾಗ ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಶಿಗ್ಗಾಂವ್–ಸವಣೂರು ತಾಲ್ಲೂಕಿನ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಧಾರವಾಡ ಪ್ರಾದೇಶಿಕ ವಿಭಾಗದಿಂದ ಅನುದಾನ ಲಭ್ಯವಾದ ಮೇರೆಗೆ ಅಭಿವೃದ್ಧಿ ಕೆಲಸ ಮಾಡಲಾಗುತ್ತದೆ ಹಾಗೂ ಹಾವೇರಿ ಸಾಮಾಜಿಕ ಅರಣ್ಯ ವಿಭಾಗಗಳಿಂದ ಸಿ ಮತ್ತು ಡಿ ಗೋಮಾಳ ಮತ್ತು ಬರಡು ಭೂಮಿಗಳಲ್ಲಿ ಅರಣ್ಯ ಅಭಿವೃದ್ಧಿ ಕೆಲಸ ಸಹ ಮಾಡಲಾಗುತ್ತಿದೆ ಈಗಾಗಲೇ ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರದ ಅಧಿಸೂಚನೆ ಸಂಖ್ಯೆ ಎಫ್ಇಇ–237/ಎಫ್‌ಡಬ್ಲ್ಯೂಎಲ್–05, ದಿನಾಂಕ

96–2006ರ ಪ್ರಕಾರ ಬಂಕಾಪುರ ಕೋಟೆ ಪ್ರದೇಶದ 139 10 ಎಕರೆ ಪ್ರದೇಶವನ್ನು ನವಿಲು ಸಂರಕ್ಷಣಾ ಪ್ರದೇಶವೆಂದು ಘೋಷಣೆ ಮಾಡಿರುವುದರಿಂದ ಈ ಪ್ರದೇಶದಲ್ಲಿ ವನ್ಯಜೀವಿ ಉಪ ವಿಭಾಗದ ಕಾರ್ಯ ವ್ಯಾಪ್ತಿಯಲ್ಲಿ ಬರುವುದರಿಂದ ನವಿಲು ಸಂರಕ್ಷಣಾ ಪ್ರದೇಶವೆಂದು ಘೋಷಣೆ ಮಾಡಿದ ಪ್ರದೇಶದಲ್ಲಿ ನವಿಲುಗಳ ವಾಸಸ್ಥಾನ ಅಭಿವೃದ್ಧಿ ಸಂರಕ್ಷಣೆ ಹಾಗೂ ಈ ಪ್ರದೇಶಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ರೂ 18 00 ಲಕ್ಷದ ಪ್ರಸ್ತಾವನೆಯನ್ನು ದಿನಾಂಕ 22–11–2006 ಮತ್ತು 08–01–2007ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ ಇದಲ್ಲದೇ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗದವರು ಸಹ ದಿನಾಂಕ 26–12–2006 ರಂದು ಆಯುಕ್ತರು ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ರವರಲ್ಲಿಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ

ಆ) 2005–06ನೇ ಸಾಲಿನಿಂದ ಜೆಬಿಐಸಿ ನೆರವಿನ 2ನೇ ಹಂತದ ಯೋಜನೆಯನ್ನು ರಾಜ್ಯಾದ್ಯಂತ ಕಾರ್ಯರೂಪಕ್ಕೆ ತರಲಾಗಿದೆ ಸದರಿ ಯೋಜನೆಯಡಿ ಧಾರವಾಡ ಪ್ರಾದೇಶಿಕ ವಿಭಾಗದಿಂದ 2005–06 ಹಾಗೂ 2006–07ನೇ ಸಾಲಿನಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ

1 ಕಮಲಾನಗರದ ಹುಣಸಿಕುಮರಿ 110 ಹೆ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ನೈಸರ್ಗಿಕ ಪುನರುತ್ಪತ್ತಿ ಅಭಿವೃದ್ಧಿ ಕೆಲಸ
2 ಕುನ್ನೂರು ಗ್ರಾಮದ ಹುಣಸಿಕುಮರಿ ಅಡವಿ ಸೋಮಾಪುರ 120 ಹೆ ನೈಸರ್ಗಿಕ ಪುನರುತ್ಪತ್ತಿ ಅಭಿವೃದ್ಧಿ ಕೆಲಸ
3 ಹಳವತರ್ಲಘಟ್ಟ 40 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸುವುದು
4 ಬಿ ಕೋಣನಕೇರಿ 44 ಹೆ ಪ್ರದೇಶದಲ್ಲಿ 2006–07ನೇ ಸಾಲಿಗೆ ನೆಡುತೋಪು ಬೆಳೆಸುವ ಕೆಲಸ ಕೈಗೊಳ್ಳಲಾಗಿದೆ
5 2006–07ನೇ ಸಾಲಿನಲ್ಲಿ ಕೋಣನಕೇರಿ 50 ಹೆ ಪ್ರದೇಶದಲ್ಲಿ ನೈಸರ್ಗಿಕ ಪುನರುತ್ಪತ್ತಿ ಅಭಿವೃದ್ಧಿ ಕೆಲಸ ಕೈಗೊಳ್ಳಲಾಗಿದೆ

ಹಾವೇರಿ ಸಾಮಾಜಿಕ ಅರಣ್ಯ ವಿಭಾಗದಿಂದ ಸವಣೂರು ಮತ್ತು ಶಿಗ್ಗಾಂವ ತಾಲ್ಲೂಕುಗಳಲ್ಲಿ ಕೃಷಿ ಅರಣ್ಯ ಪದ್ಧತಿಯನ್ನು ಅಭಿವೃದ್ಧಿಪಡಿಸಲು ರೈತರ ಜಮೀನಿನಲ್ಲಿ ಪ್ರಾತ್ಯಕ್ಷಿಕೆ ಪ್ಲಾಟ್‌ಗಳನ್ನು ಹಾಗೂ ಸಸಿ ಬೆಳೆಸಿ ವಿತರಿಸುವ ಮತ್ತು ರೈತರಲ್ಲಿ ಅರಣ್ಯಾಭಿವೃದ್ಧಿ ಬಗ್ಗೆ ಆಸಕ್ತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ

ಇ) ಜೆಬಿಐಸಿ ನೆರವಿನ 2ನೇ ಹಂತದ ಯೋಜನೆಯಡಿ ಬರಡು ಭೂಮಿ (ಕ್ಷೀಣಿತ ಅರಣ್ಯ ಪ್ರದೇಶ) ಅರಣ್ಯೀಕರಣಕ್ಕೆ ಬಿಡುಗಡೆಯಾದ ಅನುದಾನ ಗ್ರಾಮವಾರು, ಕಾಮಗಾರಿವಾರು ಮಾಹಿತಿಯು ಈ ಕೆಳಗಿನಂತೆ ಇರುತ್ತದೆ –

ಕ್ರ ಸಂ	ಗ್ರಾಮ	ಕಾಮಗಾರಿ	ಸರ್ಕಾರದಿಂದ ಬಿಡುಗಡೆಯಾದ ಅನುದಾನ (ರೂ ಗಳಲ್ಲಿ)
	2005–06		
1	ಮದಲಿ ಸಸ್ಯ ಕ್ಷೇತ್ರ	5"x8" ಅಳತೆಯ 90000 ಸಸಿ ಬೆಳೆಸುವಿಕೆ	139000
2	ಕಮಲಾನಗರ ಬಿ–III (ಕಮಲಾನಗರ ಗ್ರಾಅಸ)	ಮಾದರಿ–1 ರಡಿ 110 ಹೆ ಪ್ರದೇಶದಲ್ಲಿ ನೈಸರ್ಗಿಕ ಪುನರುತ್ಪತ್ತಿ	775 918
3	ಹುಣಸೇ ಕುಮರಿ ಬಿ-III (ಕುನ್ನೂರು ಗ್ರಾ ಅ ಸ)	ಮಾದರಿ–1 ರಡಿ 120 ಹೆ ಪ್ರದೇಶದಲ್ಲಿ ನೈಸರ್ಗಿಕ ಪುನರುತ್ಪತ್ತಿ	850,353
4	ಕೋಣನಕೇರಿ (ಸ್ಯಾಬಲ್ ಸರ್ವೆ ನಂ 59) (ಕೋಣನಕೇರಿ ಗ್ರಾಅಸ)	ಮಾದರಿ–4 ರಡಿ 44 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	442,182
5	ದುಂಡಶಿ–ಹಳವರ್ತಲ ಘಟ್ಟ (ಹಳವರ್ತಲ ಘಟ್ಟ ಗ್ರಾಅಸ)	ಮಾದರಿ–4 ರಡಿ 40 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	371,650

2006–07

6	ಮದಲಿ ಸಸ್ಯಕ್ಷೇತ್ರ	75480 8"x12" ಅಳತೆಯ ಸಸಿ ಬೆಳೆಸುವಿಕೆ	67,536
7	ಮದಲಿ ಸಸ್ಯಕ್ಷೇತ್ರ	18720 6x9 ಅಳತೆಯ ಸಸಿ ಬೆಳೆಸುವಿಕೆ	15,824
8	ಕಮಲಾನಗರ ಬಿ–III (P) (ಕಮಲಾನಗರ ಗ್ರಾಅಸ)	110 ಹೆ ಮೊದಲನೇ ವರ್ಷದ ನೆಡುತೋಪು ನಿರ್ವಹಣೆ (ಮಾದರಿ–1)	124 948
9	ಹುಣಸೆಕುಮರಿ ಬಿI–II (P)	120 ಹೆ ಮೊದಲನೇ ವರ್ಷದ ನೆಡುತೋಪು ನಿರ್ವಹಣೆ (ಮಾದರಿ–1)	139,555
10	ದುಂಡರಿ/ಹಳವರ್ತಲ್ ಘಟ್ಟ (ಸರ್ವೆ ನಂ 150 ಎ2 149)	ಮಾದರಿ–4 ರಡಿ 40 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸುವುದು	329,975
11	ಬಿ ಕೋಣನಕೇರಿ ಸ್ಯಾಬಲ್ ಎಫ್ ನಂ 13 & 59	44 ಹೆ ಪ್ರದೇಶದಲ್ಲಿ ನೆಡುತೋಮ ಬೆಳೆಸುವುದು	363,500
12	ಬಿ ಕೋಣನಕೇರಿ ಎಫ್ ಸರ್ವೆ ನಂ 13	ಮಾದರಿ–1 ರಡಿ 50 ಹೆ ಅರಣ್ಯ ಪ್ರದೇಶದಲ್ಲಿ ನೈಸರ್ಗಿಕ ಪುನರುತ್ಪತ್ತಿ	207,095

		ಮುಂಗಡ ಕಾಮಗಾರಿ	
13	ಅಲ್ವತ್ತರ್ ಘಟ್ಟ/ದುಂಡಶಿ ಎಫ್ ಸರ್ವೆ ನಂ 149 (ಪಿ) ಮತ್ತು 150/ಎ–2	50 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ_ ಕಾಮಗಾರಿ	188,605
14	ಮುಲಕೇರಿ ಎಫ್ ಸರ್ವೆ ನಂ 42 (ಪಿ)	30 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	150,979
15	ಕರಕಿ ಕೊಪ್ಪ ಎಫ್ ಸರ್ವೆ ನಂ 1	35 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	567,900
16	ನಾರಾಯಣಪುರ ಎಫ್ ಸರ್ವೆ ನಂ 144 (ಮುಟ್ಕಳ್ಳಿ)	35 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	510,800
17	ಕುನ್ನೂರು ಎಫ್ ಸರ್ವೆ ನಂ ಬಿಎಲ್–III	30 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	437,900

18	ಮುಲಕೇರಿ ಎಫ್ ಸರ್ವೆ ನಂ 42 (ಪಿ)	10 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	103,000
19	ಹಳಾವತಾರಲ್ ಘಟ್ಟ ಎಫ್ ಸರ್ವೆ ನಂ 150/ಡಿ	10 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	103,000
20	ಕರಕಿ ಕೊಪ್ಪ ಎಫ್ ಸರ್ವೆ ನಂ 1	10 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	103,000
21	ನಾರಾಯಣಪುರ ಎಫ್ ಸರ್ವೆ ನಂ 143	14 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	144,200
22	ಕುನ್ನೂರು ಬಿI-III (ಪಿ)	12 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	123,600

23	ಬಿ ಕೋಣಕನೇರಿ ಎಫ್ ಸರ್ವೆ ನಂ 9 & 12	14 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಮುಂಗಡ ಕಾಮಗಾರಿ	144,200

ಟಿಪ್ಪಣಿ ಅ ಸಂ 13 ರಿಂದ 23 ರವರೆಗೆ ತೋರಿಸಿದ ಕೆಲಸಗಳು ಪ್ರಗತಿಯಲ್ಲಿವೆ ಆರ್ಥಿಕ ಖರ್ಚು ಸಾಧನೆಯಲ್ಲಿರುವುದಿಲ್ಲ ಕ್ರಿಯಾ ಯೋಜನೆಯ ಪ್ರಕಾರ ಲಭ್ಯವಿರುವ ಅನುದಾನವನ್ನು ನಮೂದಿಸಿದೆ

ಹಾವೇರಿ ಸಾಮಾಜಿಕ ಅರಣ್ಯ ವಿಭಾಗದ 2005–2006ನೇ ಸಾಲಿನ ಪ್ರಗತಿ ವರದಿ (ಆರ್ ಎಸ್ ಪಿ ಡಿ) –

1	ಮದಲಿ ಸಸ್ಯಕ್ಷೇತ್ರ (ಆರ್ಎಸ್‌ಡಿಪಿ)	5"X 8" ಅಳತೆಯ 90000 ಸಸಿ ಪೋಷಣೆ	282050
2	ಮದಲಿ ಸಸ್ಯಕ್ಷೇತ್ರ 12ನೇ ಹಣಕಾಸು	5"X 8" ಅಳತೆಯ 30600 ಸಸಿ ಪೋಷಣೆ	51,000
		8"X 12" ಅಳತೆಯ 9000 ಸಸಿ ಪೋಷಣೆ	46,300
3	ಕೆ ಎಫ್ ಡಿ ಎಫ್ (ಒಪಿ)	150 ಹೆ ಪ್ರದೇಶದಲ್ಲಿ 2ನೇ ವರ್ಷದ ನೆಡುತೋಪು ನಿರ್ವಹಣೆ	287,500
4	ತಡಸ್ ಸ ಸಂ 396 (ಪಿ), 397, 398 (ಪಿ) ಡಿ ಡಿ ಎಫ್	40 ಹೆ ಪ್ರದೇಶದಲ್ಲಿ 1ನೇ ವರ್ಷದ ನೆಡುತೋಪು ನಿರ್ವಹಣೆ	215,193

5	ಕುನ್ನೂರು ಮತ್ತು ಗುಡ್ಲಗಿರಿ ಎಫ್ ಸ ನಂ 136 ಕೆ ಎಫ್ ಡಿ ಎಲ್ (ಒಪಿ)	15 ಹೆ ಪ್ರದೇಶದಲ್ಲಿ 1ನೇ ವರ್ಷದಲ್ಲಿ ನೆಡುತೋಪು ನಿರ್ವಹಣೆ	97,000
6	ಹಳಾವತಾರಲ್ ಫಟ್ಟ ಸರ್ವೆ ನಂ 155 ಮತ್ತು 157 12ನೇ ಆರ್ಥಿಕ ವರ್ಷ	17 ಹೆ ಪ್ರದೇಶದಲ್ಲಿ ನೆಡುತೋಪು ನಿರ್ವಹಣೆ	230,948
7	ಹಳಾವತಾರಲ್ ಫಟ್ಟ (ಕುನ್ನೂರು) ಸ ನಂ 150 ಸಿ, 150ಡಿ, 186, 174, 150 (ಪಿ) ಕೆ ಎಫ್ ಡಿ ಎಫ್ (ಒಪಿ)	150 ಹೆ ಪ್ರದೇಶದಲ್ಲಿ 2ನೇ ವರ್ಷದ ನೆಡುತೋಪು ನಿರ್ವಹಣೆ	163 384
8	ಕುನ್ನೂರು ಮತ್ತು ಗುಡ್ಡಗಿರಿ ಎಫ್ ಸ ನಂ 136 ಕೆ ಎಫ್ ಡಿ ಎಫ್ (ಒಪಿ)	15 ಹೆ ಪ್ರದೇಶದಲ್ಲಿ 1ನೇ ವರ್ಷದ ನೆಡುತೋಪು ನಿರ್ವಹಣೆ	46,500
9	ತಡಸ್ ಎಫ್ ಸ ನಂ 397 (ಸಿ), 398 (ಪಿ) ಡಿ ಡಿ ಎಫ್	40 ಹೆ ಪ್ರದೇಶದಲ್ಲಿ 1ನೇ ವರ್ಷದ ನೆಡುತೋಪು ನಿರ್ವಹಣೆ	137,718
10	ಹಳಾವತಾರಲ್ ಫಟ್ಟ ಸ ನಂ 150, 12ನೇ ಹಣಕಾಸು	17 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸುವುದು	1170,000

ಹಾವೇರಿ ಸಾಮಾಜಿಕ ಅರಣ್ಯ ವಿಭಾಗದ 2005–06ನೇ ಸಾಲಿನ ಪ್ರಗತಿ ವರದಿ

1	ಸವಣೂರು ಕಲ್ಚರಲ್ ಆಪರೇಶನ್	4"X 6" ಅಳತೆಯ ಸಸಿ ಬೆಳಸುವಿಕೆ 6700 ಸಂಖ್ಯೆ	5,000

PL
38

2	ಶಿಗ್ಗಾಂವ್ ಕಲ್ಚರಲ್ ಆಪರೇಶನ್	4"X6" ಅಳತೆಯ ಸಸಿ ಬೆಳಸುವಿಕೆ 10900 ಸಂಖ್ಯೆ	8,150
3	ಸವಣೂರು ತಾಲ್ಲೂಕು ಕಳಲ್ಯೊಂಡ ಸ ನಂ 83, ಎಸ್‌ಜಿಆರ್‌ವೈ 20%	5 ಹೆ ಪ್ರದೇಶದಲ್ಲಿ ನೆಡುತೋಮ ಬೆಳೆಸುವುದು	123,200
4	ಶಿಗ್ಗಾಂವ ಹಳವತಾರಲ್ ಘಟ್ಟ ಸ ನಂ 37 ಎಸ್‌ಜಿಆರ್‌ವೈ 20%	5 ಹೆ ಪ್ರದೇಶದಲ್ಲಿ ನೆಡುತೋಪು ಬೆಳೆಸುವುದು	123,200
	2006–07		
1	ಸವಣೂರು ತಾಲ್ಲೂಕು ಕಳಲ್ಯೊಂಡ ಸ ನಂ 83, ಎಸ್‌ಜಿಆರ್‌ವೈ 20%	5 ಹೆ ಪ್ರದೇಶದಲ್ಲಿ ನೆಡುತೋಮ ನಿರ್ವಹಣೆ	22,000
2	ಶಿಗ್ಗಾಂವ್ ಹಳಾವತಾರಲ್ ಘಟ್ಟ ಸ ನಂ 37 ಎಸ್‌ಜಿಆರ್‌ವೈ 20%	5 ಹೆ ಪ್ರದೇಶದಲ್ಲಿ ನೆಡುತೋಮ ನಿರ್ವಹಣೆ	28,100

ಈ) ಇಲಾಖೆಯ ಯೋಜನೆಗಳಿಗೆ ಆಯಾ ವಿಭಾಗದ ಮತ್ತು ಅಗತ್ಯತೆ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ

ಉ) ಈಗಾಗಲೇ ಮೇಲೆ ವಿವರಿಸಿದಂತೆ ಕ್ರಮ ತೆಗೆದುಕೊಳ್ಳಲಾಗಿದೆ

*811 (564) ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಿತ್ತೂರು ಮತಕ್ಷೇತ್ರದ ಗ್ರಾಮಗಳಾದ ಕಟತನಾಳ, ಇಟಗಿ, ಕಾದ್ರೊಳ್ಳಿ, ಗಂದಿಗವಾಡ ಹಾಗೂ ದೇವರಶೀಗಿಹಳ್ಳಿ ಹತ್ತಿರ ಮಲಪ್ರಭಾ ನದಿಗೆ ಬಂದಾರಗಳನ್ನು ನಿರ್ಮಿಸಿ ಕೆರೆಗಳನ್ನು ತುಂಬಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,